# ಹೆಸರಿನಲ್ಲಿ ನಾಮಾಮೃತ ತುಂಬಿ

ಒಂದು ಊರಿನ ಹೆಸರಿನಲ್ಲಿ ಹಾಗೂ ಅಲ್ಲಿನ ನದಿ, ಮಡು, ಕೆರೆಗಳು ಆ ಪ್ರದೇಶದ ಜನಗಳ ಅಭಿರುಚಿ, ಆಂತರಿಕ ಸೌಂದರ್ಯ, ಭಾಷೆಯ ಸೊಗಸು ಮತ್ತು ಪ್ರಾದೇಶಿಕ ಸಂಸ್ಕೃತಿಯ ಸತ್ವವನ್ನೆಲ್ಲಾ ಮೈಗೂಡಿಸಿಕೊಂಡು ಅಮರವಾಗಿರುತ್ತವೆ. ಸಾಮಾನ್ಯ ಜನತೆ ನಿರ್ಮಿಸಿದ ಭೂಮಿಯ ಮೇಲಿನ ಇಂತಹ ಅಮರ ಕೃತಿಗಳನ್ನು ಮನುಷ್ಯನ ಕ್ಷುದ್ರ ಮನಸ್ಸು ಆಗಾಗ ಜನತೆ ಇಟ್ಟ ಹೆಸರನ್ನು ಬದಲಿಸುವ ಮೂಲಕ ತನ್ನೊಳಗಿರುವ ಸ್ವಾರ್ಥ ಮತ್ತು ಬರಡು ಅಭಿರುಚಿಯನ್ನು ಪ್ರದರ್ಶಿಸುತ್ತಿರುತ್ತದೆ. ಒಂದು ಪ್ರದೇಶದ ಜನತೆಯ ಮನೋ ಇಂಗಿತದ ಅರಿವಿಲ್ಲದ ಅಲ್ಲಿನ ಸಾಂಸ್ಕೃತಿಕ ಸೂಕ್ಷ್ಮ ಒಳನೋಟವಿಲ್ಲದ ಅಧಿಕಾರಸ್ಥರಲ್ಲಿ, ಹೀಗೆ ಹಿಂದು ಮುಂದು ನೋಡದೆ ಹೆಸರು ಬದಲಿಸುವ ಪ್ರವೃತ್ತಿ ಇಂದು ಹೆಚ್ಚಾಗಿಯೇ ಕಂಡುಬರುತ್ತಿರುವುದು ಪ್ರಜಾಪ್ರಭುತ್ವದ ವಿಪರ್ಯಾಸ.

ಕರ್ನಾಟಕದ ದಕ್ಷಿಣ ಭಾಗದ ಕಟ್ಟಕಡೆಯ ಜಿಲ್ಲೆಯಾಗಿರುವ ‘ಚಾಮರಾಜನಗರ’ ಈ ಹಿಂದೆ ಅದು ‘ಹರಿಕುಠಾರ’ ಎಂಬ ಹೆಸರನ್ನು ಧರಿಸಿತ್ತು. ಅದು ಅಲ್ಲಿನ ಪ್ರಾದೇಶಿಕ ವೈಶಿಷ್ಟ್ಯದ ಎಲ್ಲವನ್ನೂ ಒಳಗೊಂಡು ಜನತೆಯ ಅಭಿರುಚಿಯ ಸಂಕೇತವಾಗಿತ್ತು. ಆದರೆ ಅದನ್ನು ಮೈಸೂರು ಅರಸರ ಹೆಸರಿನಲ್ಲಿ ‘ಚಾಮರಾಜನಗರ’ ಎಂದು ಅರಮನೆಯ ಆಡಳಿತ ಹೆಸರಿಸಿತು! ಇದು ಜನತೆಯ ಅಭಿರುಚಿಯನ್ನೇ ತಿರಸ್ಕರಿಸಿದಂತೆ! ಆದರೂ ಅಲ್ಲಿನ ಜನ ತಮ್ಮ ಪ್ರೀತಿಯ ತಾಯ್ನಾಡನ್ನು ಹಳೆಯ ಹೆಸರಿನಿಂದಲೇ ಕರೆಯುತ್ತಿದ್ದರಂತೆ. ಅಲ್ಲಿನ ಹಿರಿಯರು ಹೇಳುವಂತೆ, ಹೊಸ ಹೆಸರನ್ನು ಉಚ್ಚರಿಸಲಾಗದ ಜನರು ಅರಮನೆಯ ಕಾಲಾಳುಗಳ ಕೈಯಲ್ಲಿ ಚಾಟಿ ಏಟು ತಿನ್ನುತ್ತಿದ್ದರಂತೆ! ಕ್ರಮೇಣ ಏಟಿನ ಭಯದಿಂದ ಆ ನಗರಕ್ಕೆ ತಾವೆ ಇಟ್ಟ ಹೆಸರನ್ನು ಬದಿಗೆ ಸರಿಸಿ, ‘ಚಾಮರಾಜ ನಗರ’ ಎಂದು ಕರೆಯಲು ಶುರುಮಾಡಿದರು ಎಂದು ಸ್ಥಳೀಯ ಚರಿತ್ರೆ ಹೇಳುತ್ತದೆ. ಅದೇ ರೀತಿ ‘ಕೃಷ್ಣರಾಜನಗರ’ ಹಿಂದೆ ‘ಎಡತೊರೆ’ ಎನ್ನುವ ಅಚ್ಚ ಕನ್ನಡದ ಹೆಸರನ್ನು ಹೊಂದಿತ್ತು. ಇದಕ್ಕೆ ಕಾರಣವೆಂದರೆ, ಈ ಊರಿನ ಎಡಭಾಗದಲ್ಲಿ ಹರಿಯುವ ಕಾವೇರಿ ನದಿಯನ್ನು ಕಂಡು ಅಲ್ಲಿನ ಜನಸಾಮಾನ್ಯರು ಊರಿಗೆ ‘ಎಡತೊರೆ’ ಎಂದು ಹೆಸರಿಸಿದ್ದರು. ಈ ಮೂಲಕ ತಮ್ಮ ಬದುಕಿನೊಂದಿಗೆ ಬೆಸೆದುಕೊಂಡಿರುವ ಕಾವೇರಿ ನದಿಗೆ ಈ ರೀತಿ ಗೌರವ ತೋರಿದ್ದರು. ಆದರೆ ರಾಜಶಾಹಿಗೆ ನಿಷ್ಠರಾಗಿದ್ದ ಕೆಲವು ಮನಸ್ಸುಗಳು ‘ಎಡತೊರೆ’ಯನ್ನು ‘ಕೃಷ್ಣರಾಜನಗರ’ ಎಂದು ಬದಲಿಸಿದವು. ಇವೆಲ್ಲಾ ಜನತೆಯ ಇಚ್ಛೆಗೆ ವಿರುದ್ಧವಾದ ನಡೆಗಳು.

ಹೀಗೆಯೇ ಮಂಡ್ಯ ಜಿಲ್ಲೆಯ ‘ಕಾಳಮುದ್ದನ ದೊಡ್ಡಿ’ಯನ್ನು ಕೆಲವು ವರ್ಷಗಳಿಂದ ‘ಭಾರತೀ ನಗರ’ ಎಂದು ಕರೆಯಲಾಗುತ್ತಿದೆ. ಇದೇ ರೀತಿ ‘ಅತ್ತಿ ಕುಪ್ಪೆ’ ಪಟ್ಟಣವನ್ನು ‘ಕೃಷ್ಣರಾಜ ಪೇಟೆ’ ಎಂದು ಬದಲಿಸಲಾಗಿದೆ. ಇವೆಲ್ಲ ಒಂದು ಪ್ರದೇಶದ ಸಾಂಸ್ಕೃತಿಕ ಸೂಕ್ಷ್ಮಗಳ ಅರಿವಿಲ್ಲದೆ ಹೆಸರು ಬದಲಿಸುವ ನಡೆಗಳು, ಸ್ಥಳೀಯ ಚರಿತ್ರೆ ಮತ್ತು ಐತಿಹ್ಯಗಳನ್ನು ಮರೆಮಾಚಿಸುವ ಮಾದರಿಗಳು. ಹಿಂದೆ ಬೆಂಗಳೂರಿನಲ್ಲಿ ‘ಸಾರಕ್ಕಿ’ ಬಡಾವಣೆ, ‘ಹೊಸಹಳ್ಳಿ’, ‘ಗುಟ್ಟಳ್ಳಿ’, ‘ಗೊಲ್ಲರಹಟ್ಟಿ’ ಮುಂತಾದ ಸ್ಥಳೀಯ ಹೆಸರುಗಳಿದ್ದ ಪ್ರದೇಶಗಳಿದ್ದವು. ಇವೆಲ್ಲ ಈಗ ತಂತ್ರಜ್ಞಾನ ಯುಗದೊಂದಿಗೆ ರಾಜೀಮಾಡಿಕೊಂಡು ತಮ್ಮ ಮೂಲ ಹೆಸರುಗಳನ್ನು ಬದಲಿಸಿಕೊಂಡಿವೆ. ಈ ದಾರಿಯಲ್ಲೇ ‘ಕನ್ನಂಬಾಡಿ ಕಟ್ಟೆ’ ಎಂಬುದು ‘ಕೃಷ್ಣರಾಜ ಸಾಗರ’ ಎಂದಾಗಿದೆ. ಇಂತಹ ಪ್ರಯತ್ನಗಳು ಚರಿತ್ರೆಯಲ್ಲಿ ಹೇರಳವಾಗಿ ಸಿಗುತ್ತವೆ. ಇನ್ನು ಉತ್ತರದಲ್ಲಂತೂ ‘ಅಲಹಾಬಾದ್’ ನಗರವನ್ನು ‘ಪ್ರಯಾಗ್‌ರಾಜ್’ ಎಂದು ಬದಲಿಸಲಾಗಿದೆ. ಹೀಗೆ ಇವೆಲ್ಲ ಕೇವಲ ಒಂದು ಪ್ರದೇಶದ ಹೆಸರುಗಳಲ್ಲ! ಈ ಹೆಸರುಗಳು ಅಲ್ಲಿನ ಸ್ಥಳೀಯ ಚರಿತ್ರೆಯ ಅಂಗಗಳಾಗಿದ್ದವು. ಚರಿತ್ರೆಯ ಚಹರೆಗಳನ್ನೇ ಬದಲಿಸುವ ಈ ಪ್ರಯತ್ನ ನವರಾಜಕಾರಣದ ಮಾದರಿಯೊಂದನ್ನು ನಮ್ಮ ಮುಂದಿಡುತ್ತಿದೆ. ರಾಜಕೀಯ ತಜ್ಞರು ಪ್ರಜಾಪ್ರಭುತ್ವಕ್ಕೆ ಒಂದು ನಿರ್ದಿಷ್ಟ ವ್ಯಾಖ್ಯೆಯನ್ನು ನೀಡಿದ್ದಾರೆ. ವಿಪರ್ಯಾಸ ಎಂದರೆ, ಈ ವ್ಯಾಖ್ಯೆಯನ್ನು ಉದಾಹರಿಸಿ ಹೇಳಲು ತಕ್ಕ ಮಾದರಿಯೊಂದು ನಮ್ಮ ನಡುವೆ ಇಲ್ಲ.

ದಕ್ಷಿಣ ಕರ್ನಾಟಕದಲ್ಲಿ ‘ಸುವರ್ಣಮುಖಿ’, ‘ಜಯಮಂಗಲಿ’ ಎಂಬ ನದಿಗಳಿವೆ. ಇವೆಲ್ಲ ಮಳೆಗಾಲದಲ್ಲಿ ಹರಿಯುವ ಈ ನದಿಗಳು ಬೆಟ್ಟಗಳ ಕಿಬ್ಬಿಯಲ್ಲಿ ಹುಟ್ಟಿ ಹರಿಯುವಂತಹವು. ಗಾಜನೂರಿನ ಸೆರಗಿನಲ್ಲಿ ‘ಹೊನ್ನೊಳೆ’ ಎಂಬ ಮಡು ಇದೆ. ಈ ಮಡುವಿನೊಂದಿಗೆ ಡಾ. ರಾಜಕುಮಾರ್ ಅವರ ಬಾಲ್ಯದ ದಿನಗಳ ನೂರಾರು ನೆನಪುಗಳಿವೆ. ಏಕಾಂತಕ್ಕೆ, ಧ್ಯಾನಕ್ಕೆ ಹೇಳಿ ಮಾಡಿಸಿದ ಜಾಗ ಇದು. ಈ ನದಿಗಳಿಗೆ ಇಂತಹ ಮಂಗಳಕರ ಹೆಸರನ್ನು ಕೊಟ್ಟವರು ವಿಜ್ಞಾನಿಗಳಲ್ಲ! ಅರಸರಲ್ಲ! ವಿದ್ವಾಂಸರಲ್ಲ! ಅಲ್ಲಿನ ಸಾಮಾನ್ಯ ಜನತೆ ಇಟ್ಟ ಹೆಸರುಗಳು. ಜನತೆಯ ಪ್ರತಿಭಾ ಶಕ್ತಿಗೆ, ಅವರ ವಿವೇಕಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕಿಲ್ಲ! ಸ್ಥಳೀಯತೆಯೊಂದಿಗೆ ಹಾಸುಹೊಕ್ಕಾಗಿರುವ ನೂರಾರು ನದಿಗಳು, ಕೆರೆಗಳು ನಾಡಿನಲ್ಲಿವೆ. ಮಧ್ಯ ಕರ್ನಾಟಕದ ಜಿಲ್ಲೆಯಲ್ಲಿ ಕರ್ನಾಟಕದ ದೊಡ್ಡ ಕೆರೆಯಿದೆ. ಇದನ್ನು ಅಲ್ಲಿನ ಜನ ‘ಸೂಳೆ ಕೆರೆ’ ಎಂದು ಹೆಸರಿಸಿದ್ದಾರೆ. ಹಿಂದೆ ವೇಶ್ಯೆಯೊಬ್ಬಳು ಅಲ್ಲಿನ ಜನತೆಗಾಗಿ, ಪಶುಗಳಿಗಾಗಿ ತನ್ನದೇ ವೆಚ್ಚದಿಂದ ಕಟ್ಟಿಸಿದ ಕೆರೆ ಇದೆಂದು ಸ್ಥಳೀಯ ಚರಿತ್ರೆ ಹೇಳುತ್ತದೆ. ಇದೊಂದು ಹೆಮ್ಮೆಯ ವಿಚಾರವೆ. ಇದನ್ನು ಅದೇ ಹೆಸರಿನಿಂದ ಕರೆಯುವುದರಲ್ಲಿ ಯಾವ ತಪ್ಪಿದೆ! ಕೆಲ ವರ್ಷಗಳ ಹಿಂದೆ ಆಗಿನ ಸರ್ಕಾರವೊಂದು ‘ಸೂಳೆ ಕೆರೆ’ಯನ್ನು ‘ಶಾಂತಿ ಸಾಗರ’ ಎಂದು ಇದ್ದಕ್ಕಿದ್ದಂತೆ ಬದಲಿಸಿತು. ಇದಕ್ಕಾಗಿ ಜನತೆಯಿಂದ ದೊಡ್ಡ ಪ್ರತಿರೋಧವೊಂದು ನಡೆದು ಮತ್ತೆ ಆಳುವ ಸರ್ಕಾರ ಆ ಕೆರೆಗೆ ಹಿಂದಿನ ಹೆಸರನ್ನೇ ಉಳಿಸಿಕೊಂಡಿತು.

ನಮ್ಮ ವಚನಕಾರರಲ್ಲಿ ‘ಸೂಳೆ ಸಂಕವ್ವ’ ಎನ್ನುವ ವಚನಕಾರ್ತಿ ಇದ್ದಾಳೆ ಆಕೆಯ ಕೆಲವು ವಚನಗಳು ಲಭ್ಯವಿದೆ. ಸೂಳೆ ಸಂಕವ್ವನನ್ನು ‘ಸೂಳೆಸಂಕವ್ವ’ ಎಂದು ಕನ್ನಡದ ವಿದ್ವತ್ ಜಗತ್ತು ಗೌರವದಿಂದ ಕರೆಯುತ್ತಿದೆ. ಹೀಗೆಯೇ ‘ಸೂಳೆ ಕೆರೆ’ಯನ್ನು ಸೂಳೆಕೆರೆ ಎಂದು ಕರೆಯುವುದರಲ್ಲಿ ಯಾವ ದೋಷವೂ ಇಲ್ಲ. ಇದೆಲ್ಲ ಶ್ರೇಷ್ಠ, ಕನಿಷ್ಠ ಎಂದು ವಿಭಜಿಸಿ ನೋಡುವ ಸಂಪ್ರದಾಯಸ್ಥ ಸಮಾಜದ ಮನಸ್ಥಿತಿಯೇ ಹೊರತು ಬೇರೆಯಲ್ಲ. ಈಗಲೂ ಇದೇ ಹೆಸರಿನ ಕೆರೆಗಳು ಕರ್ನಾಟಕದಲ್ಲಿವೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಒಮ್ಮೆ ಇತ್ಯರ್ಥವಾಗಿರುವುದು ಎಲ್ಲ ಕಾಲಕ್ಕೂ ಇತ್ಯರ್ಥವಾಗಿರುತ್ತದೆ ಎನ್ನುವ ಆದರ್ಶವನ್ನು ಪಾಲಿಸುವುದೇ ಅಪರಾಧ. ತಪ್ಪಾಗಿ ಇತ್ಯರ್ಥವಾಗಿರುವುದು ಎಂದೆಂದಿಗೂ ಇತ್ಯರ್ಥವಾಗಿರುವುದು ಎಂದೆಂದಿಗೂ ಇತ್ಯರ್ಥವಾಗಿರುವುದಿಲ್ಲ. ಅದನ್ನು ಮರು ಇತ್ಯರ್ಥಗೊಳಿಸಬೇಕು ಎನ್ನುವ ಆದರ್ಶ ವಾಸ್ತವಿಕವಾಗಬೇಕೆನ್ನುವುದೇ ನಿಜ ಸಾಮಾಜಿಕ ಅಂತಃಕರಣ.

  —ಬಿ.ಆರ್. ಅಂಬೇಡ್ಕರ್

- ಎಲ್ಲರೊಂದಿಗೂ ಚೆನ್ನಾಗಿರಿ, ಆದರೆ ಕೆಲವರೊಂದಿಗೆ ಮಾತ್ರ ನಿಕಟವಾಗಿರಿ. ಹೀಗೆ ನಿಕಟರಾದವರಲ್ಲೂ ನೀವು ಅತಿಯಾಗಿ ತಿಳಿದುಕೊಂಡವರಲ್ಲಿ ಮಾತ್ರ ನಿಮ್ಮ ಆಪ್ತ ವಿಚಾರಗಳನ್ನು ತಿಳಿಸಿ.

  —ಜಾರ್ಜ್ ವಾಷಿಂಗ್ಟನ್

- ಇನ್ನೊಬ್ಬರನ್ನು ಕೊಲ್ಲಲು ಹಿಂಸೆಯೊಂದಿದ್ದರೆ ಸಾಕು, ಬೇರೆ ಆಯುಧ ಬೇಕಾಗಿಯೇ ಇಲ್ಲ.

  —ಕೀರ್ತಿನಾಥ ಕುರ್ತಕೋಟಿ

- ಹಿಂಸೆ ಮಾಡದೇ ಇರುವುದೇ ಉತ್ಕೃಷ್ಟ ಧರ್ಮ.

  —ಮಹಾಭಾರತ

- ಅಧಿಕಾರ ಎಂಬುದು ಸಮಾಜಸೇವೆ ಮಾಡುವುದಕ್ಕೆ ಇರುವ ಒಂದು ಅವಕಾಶ.

  —ಎ.ಬಿ. ವಾಜಪೇಯಿ

- ಚಿಂತೆ ಎನ್ನುವುದು ಒಂದು ಬಗೆಯ ಅಂಜಿಕೆ, ಎಲ್ಲ ಅಂಜಿಕೆಗಳೂ ಮನಸ್ಸನ್ನೂ ಉದ್ವಿಗ್ನಗೊಳಿಸುತ್ತವೆ.

  —ಬರ್ಟ್ರಂಡ್ ರಸೆಲ್

- ಪ್ರಜೆಗಳನ್ನು ಹಸಿವು ಮತ್ತು ಅಂಧಕಾರದಲ್ಲಿ ಮುಳುಗಿಸುವ ಯಾವುದೇ ಧರ್ಮವನ್ನು ನಾನು ಇಷ್ಟಪಡುವುದಿಲ್ಲ.

  —ಜವಾಹರಲಾಲ್ ನೆಹರೂ